

# ಲಂಬೂಜಿಯ ಬೂಟು!



ಈ ದಢೂತಿ ದೇಹವನ್ನು ಹೊಂದಿರುವಾತನ ಹೆಸರು ಐಗೋರ್ ವೊವ್ರೋವಿಂಸ್ಕಿ. ಬರೋಬ್ಬರಿ 7 ಅಡಿ 8.33 ಇಂಚು ಎತ್ತರವಿರುವ ಈತ ಅಮೆರಿಕದ ಅತೀ ಎತ್ತರದ ವ್ಯಕ್ತಿ! ಪಿಟ್ಯೂಟರಿ ಗ್ರಂಥಿಯ ತೊಂದರೆಯಿಂದಾಗಿ ಈತ ಹೀಗೆ ಅಸಾಧಾರಣ ಬೆಳವಣಿಗೆ ಹೊಂದಿದ್ದಾನೆ. ಇವನ ದೊಡ್ಡ ಸಮಸ್ಯೆ ಕಾಲಿಗೆ ಹಾಕುವ ಬೂಟಿನದ್ದು. ಕಳೆದ ಆರು ವರ್ಷಗಳಿಂದ ಈತನ ಪಾದಗಳ ಸೈಜ್‌ನ ಸರಿಯಾದ ಶೂ ಸಿಗುತ್ತಿಲ್ಲವಂತೆ.

'ನನ್ನ ಕಾಲಿಗೆ ಸರಿಹೊಂದುವಂತಹ ಶೂ ತಯಾರಿಸಿಕೊಡುವಂತೆ ಅನೇಕ ಕಂಪೆನಿಗಳ ಮೊರೆ ಹೋಗಿದ್ದೇನೆ. ಆದರೆ ಯಾರೂ ನನ್ನ ಸಹಾಯಕ್ಕೆ ಬಂದಿರಲಿಲ್ಲ. ಆದರೀಗ ರಿಬಾಕ್ ಕಂಪೆನಿ ಉಚಿತವಾಗಿ ಶೂ ತಯಾರಿಸಿ ಕೊಟ್ಟಿದೆ. ಇದರಿಂದ ನನ್ನ ಜೀವನದಲ್ಲಿ ಹೊಸ ಆಶಾಕಿರಣ ಮೂಡಿದಂತಾಯಿತು. ಕಳೆದು ಹೋದ ಸಂತೋಷದ ಕ್ಷಣಗಳು ಮರಳಿ ಬಂದಿವೆ' ಎನ್ನುತ್ತಾನೆ ಈತ.

'ಸರಿಯಾದ ಶೂ ಇಲ್ಲದೆ, ಕಳೆದ ದಿನಗಳು ನನ್ನ ಜೀವನದ ದುಃಖದ ಕ್ಷಣಗಳು. ನನ್ನಲ್ಲಿದ್ದ ಶೂ ಪಾದಗಳ ಅಳತೆಗೆ ಸರಿಹೊಂದುತ್ತಿರಲಿಲ್ಲ. ಅದನ್ನು ತೊಟ್ಟಾಗ ಹಿಮ್ಮಡಿ, ಬೆರಳು ನೋವು ಬರುತ್ತಿತ್ತು. ಚಳಿಗಾಲದಲ್ಲಿ ಹೊರಗೆ ಹೋಗುವುದೇ ಅಸಹನೀಯವಾಗಿತ್ತು. ಆರು ವರ್ಷಗಳ ಅವಧಿಯಲ್ಲಿ ಹದಿನಾರು ಬಾರಿ ಕಾಲಿಗೆ ಸರ್ಜರಿ ಮಾಡಿಸಿಕೊಂಡಿದ್ದೇನೆ. ಕೊನೆಯ ಸರ್ಜರಿಯಿಂದ ಈಗಷ್ಟೇ ಚೇತರಿಸಿಕೊಳ್ಳುತ್ತಿದ್ದೇನೆ. ಸರ್ಜರಿಯಿಂದಾಗಿ ಮೂರು ವರ್ಷ ಕಾಲ ಹಾಸಿಗೆಯಲ್ಲೇ ಕಳೆದಿದ್ದೇನೆ. ಇದರಿಂದ ನನ್ನ ಸ್ನಾಯು ಬಲ ಕಳೆದುಕೊಂಡಿತು. ಜೊತೆಗೆ ದೇಹದ ತೂಕವೂ ಹೆಚ್ಚಾಯಿತು' ಎಂದು ಈತ ತನ್ನ ಗೋಳು ತೋಡಿಕೊಂಡಿದ್ದಾನೆ.

ಸರಿಯಾದ ಅಳತೆಯ ಶೂ ಇಲ್ಲದೆ ಈತ ವಾಕಿಂಗ್ ಹೋಗುವುದನ್ನೂ ನಿಲ್ಲಿಸಿದ್ದ. ಈಗ ಹೊಸ ಶೂನೊಂದಿಗೆ ಈತನ ವಾಕಿಂಗ್ ಶುರುವಾಗಿದೆ. ಜತೆಗೆ ಆತನ ನಾಯಿಯೂ ಹೆಜ್ಜೆ ಹಾಕುತ್ತಿದೆ.

ಅಂದ ಹಾಗೆ, ಇವನ ಪಾದದ ಉದ್ದ 26 ಇಂಚು. 'ಇವನಿಗಾಗಿಯೇ ಸೂಕ್ತ ಶೂ ತಯಾರಿಸಲು 20 ಸಾವಿರ ಡಾಲರ್ ಖರ್ಚಾಗಿದೆ' ಎನ್ನುತ್ತದೆ ರಿಬಾಕ್ ಕಂಪೆನಿ. ಅಸಾಧಾರಣ ಎತ್ತರ ಒಂದೆಡೆ; ಜತೆಗೆ ಅನೇಕ ಬಾರಿ ಶಸ್ತ್ರಚಿಕಿತ್ಸೆ ಮಾಡಿಸಿರುವುದರಿಂದ ಕಾಲಿನ ಆಕಾರವೂ ಸಾಮಾನ್ಯರಂತೆ ಇರಲಿಲ್ಲ. ಹೀಗಾಗಿ ರಿಬಾಕ್ ಕಂಪೆನಿ ಈತನ ಶೂಗಳ ವಿನ್ಯಾಸಕ್ಕೆ ಆರು ವಾರಗಳ ಕಾಲ ತಲೆ ಕೆಡಿಸಿಕೊಂಡಿತಂತೆ!

■ ವಿದ್ಯಾಶ್ರೀ ಎಸ್.